1-00 P.M.

Bus Station for Davanagere Town

899. SRI PAMPAPATHY (Davanagere).—will the Minister for ransport and Tourism be pleased to state :—

(a) whether it has come tthe no : e of the Government that there is a shortage of bus station in Davanagere;

(b) if so, whether the Government would take up the scheme of construction of bus station ;

(c) when the said scheme would be executed ?

SRI R. GUNDU RAO (Minister for Transport and Tourism).—

(a) Yes.

(b) Yes. The K.S.R.T.C. has programmed to construct bus station at Davanagere.

(c) The said work would be executed as early as possible by the K.S.R.T.C.

ಶ್ರೀ ಪಂಪಾಪತಿ.—ಸ್ವಾಮಿ, ನಮ್ಮ ದಾವಣಗೆರೆಯು ಬಹಳ ದೊಡ್ಡದಾಗಿ ಬೆಳೆದಿರುವ ವಿಚಾರ ಸರಕಾರಕ್ಕೆ ಗೊತ್ತಿದೆ. ಇಂಥ ದೊಡ್ಡ ನಗರದಲ್ಲಿ ಸರಿಯಾದ ಬಸ್ ನಿಲ್ದಾಣವಿಲ್ಲದೆ ಅಲ್ಲಿನ ಜನರಿಗೆ ಬಹಳ ತೊಂದರೆಯಾಗಿದೆ. ತಪ್ಪು ಉತ್ತರದಲ್ಲಿ ಆದಷ್ಟು ಜಾಗ್ರತೆ ಈ ಕಾರ್ಯವನ್ನು ಕಾರ್ಯಗತ ಗೊಳಿಸಲಾಗುತ್ತದೆಂದು ಹೇಳಿದ್ದೀರಿ. ಆದಷ್ಟು ಜಾಗ್ರತೆ ಅಂದರೆ ಇನ್ನು ೧೦-೧೫ ವರ್ಷಗಳಲ್ಲಿ ಎಂದು ತಿಳಿದುಕೊಳ್ಳೋಣವೆ ?

†ಶ್ರೀ ಆರ್. ಗುಂಡೂರಾವ್.—ಆದಷ್ಟು ಜಾಗ್ರತೆ ಎಂದು ನಾನು ಹೇಳಿದ್ದೇನೆ. ಆದರೆ ಇದರ ಅರ್ಥ ತಮ್ಮ ಶಬ್ದಕೋಶದಲ್ಲಿ ೧೦-೧೫ ವರ್ಷ ಎಂದು ಇದ್ದರೆ ಅದು ನನಗೆ ಗೊತ್ತಿಲ್ಲ. ಈ ಕಾರ್ಯ ೧೯೭೯-೮೦ರ ಬಡ್ಜೆಟ್ಟಿನಲ್ಲಿ ಸೇರಿರುವುದರಿಂದ ಆದಷ್ಟು ಜಾಗ್ರತೆ ಕೆಲಸ ಕೈಗೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಆದಷ್ಟು ಜಾಗ್ರತೆ ಅಂದರೆ ಇನ್ನು ೩ ತಿಂಗಳಲ್ಲಿ ಕೆಲಸ ಮಾಡಿಸಿಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೇವೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ಸಿಟಿ ಸರ್ವಿಸ್ ಬಗ್ಗೆ ಕೂಡ ನಾವು ಹೇಳಿದ್ದೇವೆ. ಅದನ್ನು ಯಾವಾಗ ಕಾರ್ಯಗತ ಮಾಡಿಸಿಕೊಡುತ್ತೀರಿ ?

ಶ್ರೀ ಆರ್. ಗುಂಡೂರಾವ್.— ತಾವು ಮೊದಲು ಕೇಳಿದ್ದ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಈಗ ತಾವು ಕೇಳುತ್ತಿರುವುದು ಬೇರೆ ಪ್ರಶ್ನೆ. ಆದ್ದರಿಂದ ಇದಕ್ಕೆ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರ ತಡೆಹಿಡಿಯಲಾಗಿದ್ದ ಪ್ರಶ್ನೆ (ನಂ. ೫೬) ಗೆ ಸದಸ್ಯರು ಹಾಜರಿಲ್ಲ. ಇದ್ದಿಗೆ ಪ್ರಶ್ನೋತ್ತರ ಬೇಕಾಗಿಯಿತು. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣವೆಂದರೆ ಮಾನ್ಯ ಸದಸ್ಯರು ಹಾಜರಿಲ್ಲ.